# ಪಾಪಿ ಬಲ್ಲನೆ ಪರರ ಸುಖ ದುಃಖವ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 373.
2. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao, page No. 301.
3. **Ref.:** Shri Purandara Dasara Sahitya Part – 5, Loka Neeti, edited by Shri Betageri Krishna Sharma and Shri Bengeri Huchha Rayaru, page No. 110.
4. **Note:** Lyrics given without highlights are as per Ref. 1. The wordings in Ref. 2 are almost similar to Ref. 1, with few differences which are not considered here. The lyrics as per Ref. 3 are slightly different and are given separately in yellow highlights. Also, in Ref. 3 there are only 3 stanzas.
5. **Note:** Singer has followed lyrics as in Ref. 1.

ರಾಗ: ಮುಖಾರಿ ತಾಳ: ಝಂಪೆ

ಪಾಪಿ ಬಲ್ಲನೆ ಪರರ ಸುಖ ದುಃಖವ
ಕೋಪಿ ಬಲ್ಲನೆ ಶಾಂತ ಸುಗುಣದ ಘನವ || ಪ ||

ಕತ್ತೆ ಬಲ್ಲುದೆ ಹೊತ್ತ ಕತ್ತುರಿಯ ಪರಿಮಳವ
ಮೃತ್ಯು ಬಲ್ಲಳೆ ವೇಳೆ ಹೊತ್ತೆಂಬುದ
ತೊತ್ತು ಬಲ್ಲಳೆ ಮಾನಾಪಮಾನವೆಂಬುದನು
ಮತ್ತೆ ಬಲ್ಲುದೆ ಬೆಕ್ಕು ಹರಿಯ ಮೀಸಲವ || ೧ ||

ಹೇನು ಬಲ್ಲುದೆ ಮುಡಿದ ಹೂವಿನ ಪರಿಮಳವ
ಶ್ವಾನ ಬಲ್ಲುದೆ ರಾಗ ಭೇದಂಗಳ
ಮೀನು ಬಲ್ಲುದೆ ನೀರು ಸೌಳು ಸ್ವಾದೆಂಬುದನು
ಹೀನ ಬಲ್ಲನೆ ಸುಗುಣ ದುರ್ಗುಣವನು || ೨ ||

ಬಾಳೆ ಬಲ್ಲುದೆ ಮರಳಿ ಫಲವಾಗೊ ಸುದ್ದಿಯನು
ಸೂಳೆ ಬಲ್ಲಳೆ ಗೆಳೆಯಗಿಹ ಬಡತನ

ಕೇಳ ಬಲ್ಲನೆ ಕಿವುಡನೇಕಾಂತ ಮಾತುಗಳ
ಹೇಳ ಬಲ್ಲನೆ ಮೂಕ ಕನಸು ಕಂಡುದನು    || ೩ ||

ಕಾಗೆ ಬಲ್ಲದೆ ಒಳ್ಳೆ ಕೋಗಿಲೆಯ ಸ್ವರವನು
ಗೂಗೆ ಬಲ್ಲುದೆ ಹಗಲ ಹರಿದಾಟವ
ಜೋಗಿ ಬಲ್ಲನೆ ಮನೆಯೊಳಿಲ್ಲ ಉಂಟೆಂಬುದನು
ರೋಗಿ ಬಲ್ಲನೆ ಮೃಷ್ಟಾನ್ನದ ರುಚಿಯನು    || ೪ ||

ಹೇಡಿ ಬಲ್ಲನೆ ರಣದ ಸಾಹಸದ ಶೌರ್ಯವನು
ಕೋಡಗವು ಬಲ್ಲುದೆ ರತ್ನದ ಬೆಲೆಯನು
ಬೇಡಿದುದ ಕೊಡಲು ಪುರಂದರ ವಿಠಲನಲ್ಲದೆ
ನಾಡ ದೈವಗಳೇನು ಕೊಡಬಲ್ಲವೋ    || ೫ ||

**Note:** The below mentioned lyrics in yellow highlights are as per Ref. 3.

ರಾಗ: ಮೋಹನ    ತಾಳ: ಝಂಪೆ

ಪಾಪಿ ಬಲ್ಲನೆ ಪರರ ಸುಖ-ದುಃಖದಿಂಗಿತವ
ಕೋಪಿ ಬಲ್ಲನೆ ದಯಾ-ದಾಕ್ಷಿಣ್ಯವ    || ಪ ||

ಹೇನು ಬಲ್ಲುದೆ ಮುಡಿದ ಹೂವಿನಾ ಪರಿಮಳವ
ಶ್ವಾನ ಬಲ್ಲುದೆ ರಾಗ ಭೇದಂಗಳ
ಮೀನು ಬಲ್ಲುದೆ ನೀರು ಚವುಳು ಸವಿಯೆಂಬುದನು
ಹೀನ ಬಲ್ಲನೆ ತನಗೆ ಉಪಕಾರ ಮಾಡಿದುದ?    || ೧ ||

ಕತ್ತೆ ಬಲ್ಲುದೆ ತಾನು ಹೊತ್ತಿರುವ ನಿಧಿಯನ್ನು
ಮೃತ್ಯು ಬಲ್ಲುದೆ ದಯಾ ದಾಕ್ಷಿಣ್ಯವ
ತೊತ್ತು ಬಲ್ಲಳೆ ಹೀನ ಮಾನದಭಿಮಾನವನು
ಮತ್ತೆ ಬಲ್ಲುದೆ ಬೆಕ್ಕು ಮನೆಯ ಮೀಸಲನು    || ೨ ||

ಹೇಡಿ ತಾ ಬಲ್ಲನೆ ರಣರಂಗ ಧೀರವನು
ಕೋಡಗವು ಬಲ್ಲುದೆ ರತ್ನದಾಭರಣ

ಬೇಡಿದುದನೀವ ಪುರಂದರ ವಿಠಲನಲ್ಲದೆ
ನಾಡ ದೈವಗಳೆಲ್ಲ ಕೊಡಬಲ್ಲುವೇ || ೨ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ತೊತ್ತು** – ಊಳಿಗದ ಹೆಣ್ಣಾಳು, ದಾಸಿ.

**ಹರಿಯ ಮೀಸಲನು** – ನೈವೇದ್ಯ, ಎಡೆ.

**ಸೌಳುಸ್ವಾದ** – ಉಪ್ಪು, ಸಿಹಿ.

**ಬಾಳೆ ಬಲ್ಲುದೆ...** – ಬಾಳೆ ಗಿಡವು ಒಂದೇ ಬಾರಿ ಫಲ ಬಿಡುವುದೆಂಬ ಪ್ರತೀತಿ.

**ನಾಡಾಡಿ ದೈವಗಳು** – ಗ್ರಾಮ ದೇವತೆಗಳು; ಮಾರಿ, ಮಸಣಿ ಮೊದಲಾದುವು.

**Classification:** Keerthane
**Ankita:** purandara vittala
**Location:** NA
**Category:** loka neeti
**Sub-Category:** papa, sittu, sukha, dukha, daya, henu, huvu, nayi, mInu, niru, katte, abhimana, bekku, mane, ratna, abharana,
**Pravachana:** NA
**Explanation:** NA